
# ಹೊಸ ಸೃಷ್ಟಿಯ ರಹಸ್ಯ

## ಅಧ್ಯಯನ # 41



## ಸತ್ಯವೇದದಲ್ಲಿರುವ
## ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 41

# ಹೊಸ ಸೃಷ್ಟಿಯ ರಹಸ್ಯ

ದಯವಿಟ್ಟು ಗಮನಿಸಿ: ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಈ ದಿನ ಒಂದು ಮುಖ್ಯವಾದ ವಿಷಯವನ್ನು ಕುರಿತು ಅಭ್ಯಾಸಮಾಡಲಿದ್ದೇವೆ. ಒಬ್ಬ ಕ್ರೈಸ್ತನು ಯೇಸುವಿನ ಹೆಜ್ಜೆಜಾಡನ್ನು ಹಿಂಬಾಲಿಸಿ ಆತನ ಶಿಶ್ಯನಾಗಬೇಕೆಂದು ನಿರ್ಧರಿಸಿರುವವನಿಗೆ ಈ ಪಾಠ ಬಹಳ ಮುಖ್ಯವಾಗಿದೆ!

**ಹೌದು! ಹೊಸ ಸೃಷ್ಟಿಯ ಕುರಿತು ವಿಷಯವಾಗಿದೆ.**

ನಾವು ಈ ಹೊಸ ಸೃಷ್ಟಿಯ ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಗಲಾತ್ಯದವರಿಗೆ 6:15**

"ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ; ಹೊಸ ಸೃಷ್ಟಿಯೇ ಬೇಕು."

**ನೀವು ನೋಡಿದಿರಾ?**

ಈ ವಾಕ್ಯವು ಹೇಳುವದೇನೆಂದರೆ, ಒಬ್ಬ ವ್ಯಕ್ತಿ ಯೆಹೂದ್ಯನಾಗಲಿ – ("ಸುನ್ನತಿಯಾಗಿರುವವನು")..... ಅಥವಾ ಅನ್ಯನು ("ಸುನ್ನತಿಯಾಗದಿರುವವನು") ಅದು ಮುಖ್ಯವಲ್ಲ (ವಿಷಯವಲ್ಲ). ಆದರೆ ವಿಷಯವೇನೆಂದರೆ

....ಒಬ್ಬ ವ್ಯಕ್ತಿ ಹೊಸ ಸೃಷ್ಟಿಯೇ ಅಥವಾ.... ಅಲ್ಲವೇ!!

### ಈ 'ಹೊಸ ಸೃಷ್ಟಿ' ಎಂದರೇನು?

### ಒಬ್ಬ ಕ್ರೈಸ್ತನಿಗೆ ಇದು ಇಷ್ಟೊಂದು ಮುಖ್ಯವೇಕೆ?

# New Creature

**ಈ ವಿಷಯವು ನಮಗೆ ಈ ದಿನದ ಪಾಠವನ್ನು ವಿವರಿಸಲಿದೆ.**

ಈಗ ನಾವು ಕೆಳಗಿನ ವಾಕ್ಯದೊಂದಿಗೆ ಆರಂಭಿಸೋಣ –

**ಯೋಹಾನ 3:3**

**“.......ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು.”**

ಹೌದು! ಇಲ್ಲಿ ಯೇಸು.... "ಹೊಸದಾಗಿ ಹುಟ್ಟುವದನ್ನು" ಕುರಿತು ಮಾತಾಡುತ್ತಾನೆ. ಆತನು ಒಬ್ಬ ಫರಿಸಾಯನಾದ ನಿಕೊದೇಮನೆಂಬ ಒಬ್ಬ ಮನುಷ್ಯನೊಂದಿಗೆ ಮಾತನಾಡುತ್ತಿದ್ದಾನೆ!



**ಯೇಸುವಿನ ಈ ಮಾತಿನ ಅರ್ಥವೇನು?**

ಆತನೇ ಈ ವಿಷಯವನ್ನು ಕುರಿತು ವಿವರಿಸುತ್ತಾನೆ –

**ಯೋಹಾನ 3:5**

**“......ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು.”**

ಹೌದು! ಇಲ್ಲಿ ಯೇಸು ದೇವರ ರಾಜ್ಯವನ್ನು ಪ್ರವೇಶಿಸುವದಕ್ಕೆ ಇರುವ ಮೂಲ ಅಥವಾ ಆರಂಭವನ್ನು ಕುರಿತು ಮಾತನಾಡುತ್ತಿದ್ದಾನೆ!

ಆತನು ಹೇಳುವದೇನೆಂದರೆ, ಒಬ್ಬನು "ಹೊಸದಾಗಿ (ಮತ್ತೆ) ಹುಟ್ಟಬೇಕು" ಮತ್ತು ಇನ್ನೂ ವಿವರಿಸುವದೇನೆಂದರೆ ಆ ವಿಧಾನವು ಹೀಗಿರುತ್ತದೆ –

**"ನೀರಿನಿಂದಲೂ ಆತ್ಮನಿಂದಲೂ ಹುಟ್ಟುವದು"**

**ಇದರ ನಿಜವಾದ ಅರ್ಥವೇನು?**

ಈ ದಿನಗಳಲ್ಲಿ ಬಹಳ ಪ್ರಸಿದ್ಧವಾದ ಪೆಂಟಕೋಸ್ಟ ಚಳವಳಿ ಮತ್ತು ಅದರ ಸಭೆಗಳು ಅದನ್ನು ಈ ರೀತಿಯಾಗಿ ಅರ್ಥಮಾಡಿಕೊಂಡು ಈ ವಾಕ್ಯದ ಅರ್ಥವನ್ನು ಹೆಸರಾಂಥವಾಗಿ ಹೀಗೆ ಕರೆಯುತ್ತಾರೆ –

**"ಹೊಸದಾಗಿ (ಮತ್ತೆ) ಹುಟ್ಟಿದ ಚಳವಳಿ"**

ನಿಜಾಂಶವೇನೆಂದರೆ, ಪೆಂಟಕೋಸ್ಟಲ್ ಸಭೆಗಳಲ್ಲಿ ಒಂದು ಮುಖ್ಯವಾದ ಪ್ರಶ್ನೆ ಕೇಳುವದೇನೆಂದರೆ –

**"ನೀನು ಹೊಸದಾಗಿ (ಮತ್ತೆ) ಹುಟ್ಟಿದ್ದೀಯಾ??"**

**ನೀವು ಹಾಗೆ ಹೇಳಿರುವದನ್ನು ಕೇಳಿದ್ದೀರಾ?**

**ನಿಶ್ಚಯವಾಗಿಯೂ ನಮ್ಮಲ್ಲಿ ಅನೇಕರು ಒಂದಲ್ಲಾ ಒಂದು ಸಮಯದಲ್ಲಿ ಈ ವಿಷಯವನ್ನು ಕೇಳಿರಬಹುದು?**

ಅವರು ಯೇಸುವಿನ ಈ "ನೀರಿನಿಂದಲೂ ಆತ್ಮನಿಂದಲೂ ಹುಟ್ಟುವದು" ಎಂಬ ವಾಕ್ಯವನ್ನು ಸೂಚಿಸುವದೇನೆಂದರೆ –

ಮೊದಲು, "**ನೀರಿನಿಂದ ಹುಟ್ಟುವದು**" ಅಂದರೆ "**ನೀರಿನಲ್ಲಿ ಮುಳುಗಿ ದಿಕ್ಷಾಸ್ನಾನ**" ಮಾಡುವದು ಎಂದರ್ಥ.



ಎರಡನೆಯದಾಗಿ, "**ಆತ್ಮನಿಂದ ಹುಟ್ಟುವದು**" ಅಂದರೆ ಕಣ್ಣಿಗೆ ಕಾಣದಿರುವ ಪವಿತ್ರಾತ್ಮನ ದೀಕ್ಷಾಸ್ನಾನ, ಇದು "**ಅನ್ಯ ಭಾಷೆ ಮಾತಾಡುವದರಿಂದ**" ಕಣ್ಣಿಗೆ ಕಾಣುವ ಹಾಗೆ ವ್ಯಕ್ತವಾಗುವ ವಿಷಯವಾಗಿದೆ.



**ಹೌದು! ಅನೇಕರು ಈ ಎರಡು ವಿಧಾನಗಳಲ್ಲಿ ನಡೆದಿದ್ದಾರೆ ಮತ್ತು ಈಗ ..." ಮತ್ತೆ ಹುಟ್ಟಿದ ಕ್ರೈಸ್ತ" ರೆಂದು ಹೇಳಿಕೊಳ್ಳುತ್ತಾರೆ.**

ಈಗಿನ ಕ್ರೈಸ್ತ ಯುಗದಲ್ಲಿ ಈ ಚಳವಳಿಯು ಬಹಳ ವೇಗವಾಗಿ ಬೆಳೆಯುತ್ತಿದೆ. ಆದರೆ ಈ ದಿನದ ನಮ್ಮ ಪ್ರಶ್ನೆ, ಏನೆಂದರೆ –



**ಇವೆಲ್ಲವೂ ನಿಜವೆ??**

**'ಮತ್ತೆ ಹುಟ್ಟುವುದು' ಎಂದು ಯೇಸು ಹೇಳಿದ ಮಾತಿಗೆ ಇದೇ ನಿಜವಾದ ಅರ್ಥವಾ?**


**ಆಹ್! ಈ ದಿನದ ನಮ್ಮ ಅಭ್ಯಾಸದ ವಿಷಯ ಇದೇ ಆಗಿದೆ!**

ಈಗ ನಾವು ಕೆಳಗಿನ ವಾಕ್ಯವನ್ನು ಓದಿ ಆರಂಭಿಸೋಣ –

**ಯೋಹಾನ 3:8**

**“ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತೀ; ಆದರೆ**

ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ ಅಂದನು."



**ನೀವು ಅದನ್ನು ನೋಡಿದ್ದೀರಾ?**

**ನಾವು ಮತ್ತೆ ಓದೋಣ!**

ಇಲ್ಲಿ "**ಹೊಸದಾಗಿ ಹುಟ್ಟಿದ**"ವರ ಸ್ಥಿತಿಯನ್ನು ಕುರಿತು ಯೇಸು ಸ್ಪಷ್ಟವಾಗಿ ವಿವರಿಸುತ್ತಾನೆ, ಅಥವಾ ನಿರ್ದಿಷ್ಟವಾಗಿ "**ಆತ್ಮನಿಂದ ಹುಟ್ಟಿದವ**"ರನ್ನು ಕುರಿತು ವಿವರಿಸುತ್ತಾನೆ.

**ಅವರು ಗಾಳಿಯಂತೆ ಇರುತ್ತಾರೆಂದು – ಆತನು ಹೇಳುತ್ತಾನೆ.**

**ಇದರ ಅರ್ಥವೇನು?**

ಇದು ಗಾಳಿಯ ಗುಣಲಕ್ಷಣವನ್ನು ಸೂಚಿಸುತ್ತದೆ –

**ಅದು ಚಲನೆಯಲ್ಲಿ ಕಣ್ಣಿಗೆ ಕಾಣದೆಯೂ ಮತ್ತು ಪ್ರಬಲವಾಗಿದೆ.**



**"ಮತ್ತೆ ಹುಟ್ಟಿ" ದೇವೆಂದು ಹೇಳಿಕೊಳ್ಳುವ ಯಾವ ಪೆಂಟಕೋಸ್ಟ್ ನ ಸ್ನೇಹಿತರಾದವರು ಹೀಗೆ "ಗಾಳಿಯಂತಹ" ಸ್ಥಿತಿಯಲ್ಲಿ ಇದ್ದಾರೆಂದು ಹೇಳಲು ಸಾಧ್ಯವೆ!**

**ಅವರು ಗಾಳಿಯಂತೆ "ಕಣ್ಣಿಗೆ" ಕಾಣದೆಯೂ, ಬಲಶಾಲಿಗಳಾಗಿದ್ದಾರಾ??**

ಇದು ನಮ್ಮ ಕರ್ತನಾದ ಯೇಸುವಿನ ವಾಕ್ಯವಾದ – ಯೋಹಾನ 3ನೇ ಅಧ್ಯಾಯ 3 ಮತ್ತು 5ನೇ ವಾಕ್ಯವನ್ನು ಅರ್ಥಮಾಡಿಕೊಳ್ಳುವದಕ್ಕೆ ಒಂದು ಮುಖ್ಯವಾದ ಬೀಗದ ಕೈಯಾಗಿದೆ.


ಹೌದು! ಯೇಸುವಿಗೆ ಸ್ಪಷ್ಟವಾಗಿ ಗೊತ್ತಿದ್ದೇನೆಂದರೆ ಯಾರ್‍ಯಾರು "ಆತ್ಮನಿಂದ ಹುಟ್ಟಿ"ದವರೋ ಅವರೆಲ್ಲರೂ ಗಾಳಿಯಂತೆ ಇರುವರು.

**ಇದು "ಆತ್ಮನಿಂದ ಹುಟ್ಟಿ"ನಂತರ ಅನ್ಯಭಾಷೆಯಲ್ಲಿ ಮಾತನಾಡುವಂತೆ ಅಲ್ಲ!!**

**ಹಾಗಾದರೆ ಯೇಸು ಹೇಳಿದಕ್ಕೆ ನಿಜವಾದ ಅರ್ಥವೇನು?**

ಇದನ್ನು ಕಂಡುಹಿಡಿಯಲು ಈ ವಾಕ್ಯದ ವಿವರವನ್ನು ನಾವು ಚೆನ್ನಾಗಿ ಅಭ್ಯಾಸ ಮಾಡಬೇಕು!!

ಫರಿಸಾಯನಾದ ನಿಕೊದೇಮನ ವಯಸ್ಸಾದವವನಾಗಿದ್ದು – ಯೇಸು ಮತ್ತು ಆತನ ಬೋಧನೆಗಳನ್ನು, ಮತ್ತು ವಿಶೇಷವಾಗಿ ದೇವರ ರಾಜ್ಯವನ್ನು ಕುರಿತು ತಿಳಿದುಕೊಳ್ಳುವ ಕುತೂಹಲದಿಂದ "ರಾತ್ರಿಯಲ್ಲಿ" ಯೇಸುವನ್ನು ಕಾಣಲು ಬಂದನು.



ಇದಕ್ಕೆ ಬಹುಶಃ ಎರಡು ಕಾರಣಗಳಿರಬೇಕು –

ಆತನು ಒಬ್ಬ ಫರಿಸಾಯದವನಾಗಿದ್ದು ಬೇರೆ ಫರಿಸಾಯರು ಯೇಸುವನ್ನು ಆತನು ಭೇಟಿಯಾಗುವದು ನೋಡಬಾರದೆಂಬ ಎಚ್ಚರಿಕೆಯಿಂದಿದ್ದಿರಬಹುದು.

.....ಅಥವಾ ಎರಡನೆಯ ಕಾರಣವೇನೆಂದರೆ ಹಗಲಿನಲ್ಲಿ ಯೇಸು ಬಹಳ ಕೆಲಸಕಾರ್ಯಗಳಲ್ಲಿ ನಿರತನಾಗಿರುವದರಿಂದ, ರಾತ್ರಿಯಲ್ಲಿ ಮಾತ್ರ ಮಾತನಾಡಲು ಅವಕಾಶವಿರುವುದು ಇರಬಹುದು.

ಕಾರಣ ಏನೇಇರಲಿ, ನಿಕೊದೇಮನ ವಿಶಿಷ್ಟ ಗುಣವೇನೆಂದರೆ, ಆತನ ಇತರ ಫರಿಸಾಯರಂತೆ ಇಲ್ಲದೆ, ಯೇಸು ಕ್ರಿಸ್ತನು ದೇವರಿಂದ ಬಂದವನು ಎಂದು ನಂಬಿದ್ದನು. ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋಹಾನ 3:1-2**

**“ಪರಿಸಾಯರಲ್ಲಿ ಯೆಹೂದ್ಯರ ಹಿರೀಸಭೆಯವನಾದ ನಿಕೊದೇಮನೆಂಬ ಒಬ್ಬ ಮನುಷ್ಯನಿದ್ದನು. ಅವನು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದು ಆತನಿಗೆ - ಗುರುವೇ, ನೀನು ದೇವರ ಕಡೆಯಿಂದ ಬಂದ ಬೋಧಕನೆಂದು ಬಲ್ಲೆವು. ನೀನು ಮಾಡುವಂಥ ಈ ಸೂಚಕಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವದು ಯಾರಿಂದಲೂ ಆಗದು ಎಂದು ಹೇಳಿದನು.”**

**ಹೌದು! ನಿಜವಾಗಿಯೂ ಆತನು ಬಹಳ ವ್ಯತ್ಯಾಸವಾದ ಫರಿಸಾಯನು!**



ಆತನು ಯೇಸುವನ್ನು ನಂಬಿದ್ದನು ಮತ್ತು ಕರ್ತನ ಮೇಲೆ ಆತನ ನಂಬಿಕೆ ಮತ್ತು ವಿಶ್ವಾಸ ಕೆಲವು ವರ್ಷಗಳಲ್ಲಿ ಕ್ರಮೇಣವಾಗಿ ಬೆಳೆದು ಆತನು ಎಷ್ಟು ಧೈರ್ಯವಂತನಾದನೆಂದರೆ ಅರಿಮಥಾಯದ ಯೋಸೇಫನ ಜೊತೆ ಹೋಗಿ ಯೇಸುವಿನ ದೇಹವನ್ನು ತೆಗೆದುಕೊಂಡು ಹೋದನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋಹಾನ 19:38-40**

**“ಇದಾದ ಮೇಲೆ ಯೆಹೂದ್ಯರ ಭಯದಿಂದ ಗುಪ್ತವಾಗಿ ಯೇಸುವಿನ ಶಿಷ್ಯನಾಗಿದ್ದ ಅರಿಮಥಾಯದ ಯೋಸೇಫನು - ಯೇಸುವಿನ ದೇಹವನ್ನು ತೆಗೆದುಕೊಂಡು ಹೋಗುವದಕ್ಕೆ ಅಪ್ಪಣೆಯಾಗಬೇಕೆಂದು ಪಿಲಾತನನ್ನು ಬೇಡಿಕೊಂಡನು. ಪಿಲಾತನು**

**ಅಪ್ಪಣೆಕೊಡಲಾಗಿ ಅವನು ಬಂದು ಆತನ ದೇಹವನ್ನು ತೆಗೆದುಕೊಂಡು ಹೋದನು. ಇದಲ್ಲದೆ ಮೊದಲು ಒಂದು ಸಾರಿ ರಾತ್ರಿವೇಳೆಯಲ್ಲಿ ಯೇಸುವಿನ ಬಳಿಗೆ ಬಂದಿದ್ದ ನಿಕೊದೇಮನು ಸಹ ರಕ್ತಬೋಳ ಅಗರುಗಳನ್ನು ಕಲಸಿದ ಚೂರ್ಣವನ್ನು ನೂರು ಸೇರಿನಷ್ಟು ತಕ್ಕೊಂಡು ಅಲ್ಲಿಗೆ ಬಂದನು. ಅವರು ಯೇಸುವಿನ ದೇಹವನ್ನು ತಕ್ಕೊಂಡು ಯೆಹೂದ್ಯರಲ್ಲಿ ಹೂಣಿಡುವಪದ್ಧತಿಯ ಪ್ರಕಾರ ಅದನ್ನು ಆ ಸುಗಂಧದ್ರವ್ಯಗಳ ಸಹಿತವಾಗಿ ನಾರುಬಟ್ಟೆಯಲ್ಲಿ ಸುತ್ತಿದರು.”**

ಹೌದು! ಅವನು ಧೈರ್ಯವಾಗಿ ಅರಿಮಥಾಯದ ಯೋಸೇಫನ ಜೊತೆ ಹೊದದ್ದು ಮಾತ್ರವಲ್ಲದೆ,



.....ಅತ್ಯಧಿಕವಾದ ರಕ್ತಬೋಳ ಅಗರುಗಳನ್ನು ಕಲಸಿದ ಚೂರ್ಣ

.....ಮತ್ತು ಯೇಸುವಿನ ಶರೀರ ಕೆಡದಂತೆ ಕಾಪಾಡುವದಕ್ಕೆ ಸಹಾಯ ಮಾಡಿದರಿಂದ ಕರ್ತನ ಮೇಲೆ ಆತನು ತೋರಿಸಿದ ಪ್ರೀತಿಯನ್ನು ವ್ಯಕ್ತಪಡಿಸುತ್ತದೆ.

ಆದ್ದರಿಂದ ಪಂಚಶತ್ತಮ ದಿನದಂದು ಪವಿತ್ರಾತ್ಮವನ್ನು ಪಡೆದು ಯೇಸುವಿನ ಶಿಶ್ಯನಾದೆನೆಂದು ನಾವು ನಂಬುತ್ತೇವೆ.

**ಹೌದು! ಅದು ಹಾಗೆಯೇ ಆಗಿರುತ್ತದೆಂದು ನಾವು ನೆನಸುತ್ತೇವೆ!!**

ಆದರೆ, ಕರ್ತನೊಂದಿಗಿನ ಆತನ ಸಂಭಾಷಣೆ ವಿಷಯಕ್ಕೆ ಮತ್ತೆಬರೋಣ –
....ಈಗ ನಾವು ಕರ್ತನ ಮಾತಿಗೆ ಆತನ ಪ್ರತಿಕ್ರಿಯೆ ಹೇಗಿತ್ತೆಂದು ಎಚ್ಚರಿಕೆಯಿಂದ ಗಮನ ನೀಡೋಣ.
ಈಗ ಕೆಳಗಿನ ವಾಕ್ಯವನ್ನು ಓದೋಣ –

## ಯೋಹಾನ 3:4

**“ನಿಕೊದೇಮನು ಆತನನ್ನು - ಮನುಷ್ಯನು ಮುದುಕನಾದ ಮೇಲೆ ಹುಟ್ಟುವದು ಹೇಗೆ? ಅವನು ತನ್ನ ತಾಯಿಯ ಗರ್ಭದಲ್ಲಿ ತಿರಿಗಿ ಸೇರಿ ಹುಟ್ಟುವದಾದೀತೇ? ಎಂದು ಕೇಳಿದನು.”**

ನಿಕೊದೇಮನ ಈ ಮಾತುಗಳ ಮೂಲಕ ನಮಗೆ ಅರ್ಥವಾಗುವದೇನೆಂದರೆ,

ಆತನು ಹೀಗೆ ಯೋಚಿಸಿಕೊಂಡಿದ್ದನು –

**ಮತ್ತೆ ಮಗುವಾಗಿ ಹುಟ್ಟುವದು ಅಥವಾ.... ಮತ್ತೆ ಹುಟ್ಟುವ ವಿಧಾನದಲ್ಲಿ ಪ್ರವೇಶಿಸುವದು!!**

ಹೌದು! ಯೇಸು ಹೊಸದಾದ ಇನ್ನೊಂದು ಹುಟ್ಟುವ ವಿಧಾನದಲ್ಲಿ ಪ್ರವೇಶಿಸುವದನ್ನು ಕುರಿತು ಮಾತನಾಡುತ್ತಾನೆ!

ನಿಕೊದೇಮನು ಮಾತ್ರ ಅರ್ಥಮಾಡಿಕೊಳ್ಳಲಿಲ್ಲ, ಇದು ಹೇಗೆ!!

ಯೇಸುವಿನ ವಾಕ್ಯವನ್ನು ಅರ್ಥಮಾಡಿಕೊಳ್ಳುವ ಮೊದಲು ಒಂದು ಮುಖ್ಯವಾದ ವಿಷಯವನ್ನು ಗಮನಿಸೋಣ.

**ಕರ್ತನು ಮಾತನಾಡಿದಂತಹ "ಹುಟ್ಟು"ವದು ಎಂಬ ಪದಗಳಲ್ಲಿ ಮುಖ್ಯವಾದ ವ್ಯತ್ಯಾಸವನ್ನು ಇಲ್ಲಿ ಗಮನಿಸಬೇಕಾಗಿದೆ!!**


ಗ್ರೀಕ್ ಪದಗಳಲ್ಲಿ ಭಾಷಾಂತರಿಸಿರುವುದೇನೆಂದರೆ –

**"ಜೆನ್ನಾವೊ"**

(Strong's Greek # 1080)




ಇದರ ಅರ್ಥವೇನೆಂದರೆ – "(ಗರ್ಭ)ಧಾರಣೆಯಾಗು" ಮತ್ತು "(ಮುಂದೆ)ಹುಟ್ಟುವದು" ಅಥವಾ "ಉತ್ಪತ್ತಿಯಾಗು".



**ಹೌದು! ಈ ಗ್ರೀಕಿನ ಒಂದು ಪದವು ಹುಟ್ಟುವ ವಿಧಾನದ ಎರಡೂ ಕೊನೆಗಳನ್ನು ಸೂಚಿಸುತ್ತದೆ!!**

ಈ ಹುಟ್ಟುವ ವಿಧಾನವು "ಗರ್ಭಧಾರಣೆ"ಯಲ್ಲಿ ಆರಂಭಿಸಿ ನಂತರ ಒಂಬತ್ತು ತಿಂಗಳು ಕಾಲಾವಧಿಯಲ್ಲಿ ಬೆಳೆಯುವಂತೆ ಇದು ಬೆಳವಣಿಗೆ ಹೊಂದುತ್ತದೆ!!

ಈ ಗ್ರೀಕ್ ಪದದ ವ್ಯತ್ಯಾಸವುಳ್ಳ ಅರ್ಥವು ಆಂಗ್ಲ ಭಾಷೆ ಅಥವಾ ಬೇರೆ ಭಾಷಾಂತರಗಳಲ್ಲಿ ಅಷ್ಟು ಸುಲಭವಾಗಿ ಗ್ರಹಿಸುವದಕ್ಕೆ ಆಗುವುದಿಲ್ಲ.

**ಇಲ್ಲಿ ಸೂಚಿಸಿರುವ "ಹುಟ್ಟುವ" (ಗರ್ಭಧಾರಣೆ) (begettal) ಅಥವಾ ಹುಟ್ಟುವ ವಿಧಾನದ ಆರಂಭವು ವಾಕ್ಯ 3 ಮತ್ತು 7ರಲ್ಲಿ ನೋಡಬಹುದು –**

**ವಾಕ್ಯ** 3 – "....ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು."

**ವಾಕ್ಯ** 7 – "....ನೀವು ಹೊಸದಾಗಿ ಹುಟ್ಟಬೇಕು...."

**ಇಲ್ಲಿ ಸೂಚಿಸಿರುವ 'ಹುಟ್ಟುವ' ("BIRTH" ) ಅಥವಾ ಹುಟ್ಟುವ ವಿಧಾನದ ಮುಕ್ತಾಯವು ವಾಕ್ಯ 5, 6 ಮತ್ತು 8ರಲ್ಲಿ "BIRTH" ಎಂದು ನಾವು ನೋಡಬಹುದು.**

**ವಾಕ್ಯ** 5 – "....ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ...."

**ವಾಕ್ಯ** 6 – "ದೇಹದಿಂದ ಹುಟ್ಟಿದ್ದು ದೇವವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ."

**ವಾಕ್ಯ** 8 – "ಆತ್ಮನಿಂದ ಹುಟ್ಟಿದವರೆಲ್ಲರು ಆದರಂತೆಯೇ ಅಂದನು."

**ಇಗೋ! ಇದರ ವ್ಯತ್ಯಾಸವನ್ನು ನೀವು ನೋಡಿದಿರಾ?!**

ಈಗ ಅರ್ಥಮಾಡಿಕೊಂಡಿದ್ದನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡು, ಮತ್ತೆ ನಮ್ಮ ಕರ್ತನ ವಾಕ್ಯವನ್ನು ಕುರಿತು ನೋಡೋಣ –

**ಯೋಹಾನ 3:5**

**"....ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು."**

ಹೌದು! ಈ ವಾಕ್ಯದಲ್ಲಿನ "ನೀರು" ಮತ್ತು "ಆತ್ಮ" ಎಂದರೆ

....ಹೊಸ ಸೃಷ್ಟಿಯ "ಹುಟ್ಟುವ ವಿಧಾನದ" ಬೆಳವಣಿಗೆಯ ಎರಡು ಕೊನೆಗಳನ್ನು ಸೂಚಿಸುತ್ತದೆ!

ಇದು ಹೇಗೆಂದು ಕೆಳಗಿನ ಚಿತ್ರದ ಮೂಲಕ ನೋಡೋಣ –




ಇಲ್ಲಿ – "ನೀರು" ಎಂಬ ಪದವು ಒಂದು ಹೊಸ ಆರಂಭ ಅಥವಾ ಹೊಸ ಸೃಷ್ಟಿಯ (ಗರ್ಭಧಾರಣೆಯ) ಪ್ರಾರಂಭವನ್ನು ಸೂಚಿಸುತ್ತದೆ. ಇದನ್ನು ದಿಕ್ಷಾಸ್ನಾನದಲ್ಲಿ ಸೂಚಿಸಲಾಗಿದೆ.

"ನೀರು" ಎಂಬ ಪದವು ನಿಕೊದೇಮನಿಗೆ –

ಯೋಹಾನನ ದೀಕ್ಷಾಸ್ನಾನವನ್ನು (ಅಪ್ರೋಸ್ತಲರು 19:4) ಕುರಿತು ನೆನಪಿಗೆ ಬಂದಿರಬೇಕು.

....ಇದೊಂದು ಮಾನಸಾಂತರ (ಪಶ್ಚಾತಾಪ) ಮತ್ತು ಸಧಾರಣೆಯ ವಿಷಯವಾಗಿದೆ.

ಇಲ್ಲಿಯೂ ಸಹ ಯಾರ್‍ಯಾರು ಕರ್ತನನ್ನು "ಹಿಂಭಾಲಿಸಲು" ನಿರ್ಧಾರ ಮಾಡುತ್ತಾರೋ ಅವರೆಲ್ಲರಿಗೂ ಈ ರೀತಿಯಾದ ಹೆಜ್ಜೆಯಿಡುವದು ಅವಶ್ಯವಾಗಿದೆ.



ಆದರೆ ಯೇಸು ಹೇಳಿದ "ನೀರು" ಎಂಬ ಮಾತಿಗೆ ಆಳವಾದ ಅರ್ಥವಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ತೀತನಿಗೆ 3:5**

**"…..ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ…. ನಮ್ಮನ್ನು ರಕ್ಷಿಸಿದನು."**

**ಇಲ್ಲಿ ಸೂಚಿಸಿರುವ "ಸ್ನಾನ" ಎಂದರೆ ಅರ್ಥವೇನು?**

ಇದು ಸಾಮಾನ್ಯವಾದ ಅಥವಾ ನೇರಭಾಷೆಯ ನೀರು ಅಲ್ಲ, ಆದರೆ ಅತ್ಯಧಿಕ ವಿಶೇಷವಾದ "ನೀರನ್ನು" ಸೂಚಿಸುತ್ತದೆ!!

ಹೌದು! ಈ ನೀರನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 22 : 17**

**"ಇಷ್ಟವುಳ್ಳವನು ಜೀವ ಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ."**

ಆಹ್! ಹೌದು! ಇದು ದೇವರ ವಾಕ್ಯವಾದ "**ಜೀವಜಲ**"ವಾಗಿದೆ–
...... ಸತ್ಯವಾಕ್ಯ!! (**ಯೋಹಾನ** 17:17)



**ಆದ್ದರಿಂದ ಇಲ್ಲಿ "ನೀರು" ಎಂಬ ಪದಕ್ಕೆ "ಜೀವಜಲ" ಅಥವಾ...**
**ದೇವರ ವಾಕ್ಯವನ್ನು ಸೂಚಿಸುತ್ತದೆ. ಮತ್ತು ಅದೇ ನಿಜವಾದ ಅರ್ಥವಾಗಿದೆ.**

ಈ "ನೀರು" ಎಂಬ ದೇವರ ವಾಕ್ಯದ ಮೂಲಕವಾಗಿ ಹೊಸ ಸೃಷ್ಟಿಯು ಹುಟ್ಟುವ ವಿಧಾನದ (ಗರ್ಭಧಾರಣೆಯ) ಆರಂಭವಾಗುತ್ತದೆ!!

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯಾಕೋಬನು 1 : 18**

**"ಆತನು ತನ್ನ ಸುಚಿತ್ತದ ಪ್ರಕಾರ ಸತ್ಯಬೊಧನೆಯ ವಾಕ್ಯದಿಂದ ನಮ್ಮನ್ನು ಹುಟ್ಟಿಸಲಾಗಿ...."**

☞ **ಆಹ್! ಇಗೋ! ಇದು ಬಹಳ ಸ್ಪಷ್ಟವಾಗಿಲ್ಲವೇ?!**

ಇನ್ನೂ ದೃಡವಾಗುವದಕ್ಕೆ ಇದೇ ವಿಷಯವನ್ನು ನಾವು ಕೆಳಗಿನ ವಾಕ್ಯವನ್ನು ಓದುತ್ತೇವೆ –

**1 ಪೇತ್ರನು1 : 23**

**"ನೀವು ತಿರಿಗಿ ಹುಟ್ಟಿದವರಾಗಿದ್ದೀರಲ್ಲಾ; ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ. ನಾಶವಾಗದ ಬೀಜ ದಿಂದಲೇ ಉಂಟಾದದ್ದು ಅದು ದೇವರ ಸದಾ ಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು"**

ಹೌದು! "ನೀರು" ಮತ್ತು ಆರಂಭ (ಗರ್ಭಧಾರಣೆ)ವಾಗುವದು ದೇವರ ವಾಕ್ಯದಿಂದಲೆ!!

ಆದರೆ ಈ ಸತ್ಯ "ವಾಕ್ಯ"ವನ್ನು ಪಡೆಯುವದಕ್ಕೆ ಮೊದಲು ಒಬ್ಬ ವ್ಯಕ್ತಿಯು ಪರಲೋಕದ ತಂದೆಯಿಂದ ಪವಿತ್ರಾತ್ಮವನ್ನು ಪಡೆಯಬೇಕೆಂದು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಕೊರಿಂಥದವರಿಗೆ 1:22**

**"ಆತನು ನಮ್ಮ ಮೇಲೆ ಮುದ್ರೆ ಹಾಕಿ ನಮ್ಮ ಹೃದಯಗಳಲ್ಲಿ ಪವಿತ್ರಾತ್ಮನನ್ನು ಸಂಚಕಾರವಾಗಿ ಅನುಗ್ರಹಿಸಿದ್ದಾನೆ."**

ಹೌದು! ಪವಿತ್ರಾತ್ಮವಿಲ್ಲದೆ ದೇವರ "ವಾಕ್ಯಗಳು" ಮತ್ತು ಆತನ ಸತ್ಯವನ್ನು ಅರ್ಥಮಾಡಿಕೊಳ್ಳುವದು ಅಸಾಧ್ಯವಾದದ್ದು!

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಕೊರಿಂಥದವರಿಗೆ 2 :14**

**"ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತದೆ; ಅವು ಆತ್ಮವಿಚಾರದಿಂದ ತಿಳಿಯ ತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು."**

ಆದ್ದರಿಂದ ಪವಿತ್ರಾತ್ಮದೊಂದಿಗೆ ನಮಗೆ ದೇವರ ಸತ್ಯವಾಕ್ಯವು ಅರ್ಥವಾಗುತ್ತದೆ! ಮುಂದೆ ಇದು ನಮಗೆ

**.....ಹುಟ್ಟುವ ಆರಂಭಕ್ಕೆ ಮುದ್ರೆಯಾಗಿದೆ.**

ಈಗ "ನೀರಿನಿಂದ" ಹುಟ್ಟಿರಲಾಗಿ ಅಂಥವನನ್ನು ಹೀಗೆ ಸೂಚಿಸಲಾಗಿದೆ –

**....ಹೊಸಸೃಷ್ಟಿ**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**2 ಕೊರಿಂಥದವರಿಗೆ 5 : 17**

**"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."**

ಇಲ್ಲಿ ನಾವು ಮೊದಲೇ ಅಭ್ಯಾಸ ಮಾಡಿದಂತೆ (ಯೇಸು ಕ್ರಿಸ್ತನ ಸಭೆ 17, 18, ಮತ್ತು 19) ಒಬ್ಬ ಕ್ರೈಸ್ತನ ಬೆಳವಣಿಗೆಯ ವಿಧಾನವು ಮೂರು ಹೆಜ್ಜೆಗಳು ಅಥವಾ ಹಂತಗಳಲ್ಲಿರುತ್ತದೆ –

"**ಕರೆಯಲ್ಪಟ್ಟ**" ಅಥವಾ ವಿಶ್ವಾಸಿಯ ಹಂತವಾಗಿದ್ದು ಇದರ ಮುಖ್ಯವಾದ ವಿಷಯವು ಯೇಸುವಿನ ಮೇಲೆ ನಂಬಿಕೆಯಿಡುವದು ಮತ್ತು ಸತ್ಯವೇದವನ್ನು ಓದುವದು ಎಂಬದು ಆರಂಭವಾಗಿದೆ.

"**ಆರಿಸಲ್ಪಟ್ಟ**" ಅಥವಾ ಹಿಂಬಾಲಕನ ಹಂತವಾಗಿದ್ದು ಕೆಲವು ಕ್ರೈಸ್ತ ವಿಶ್ವಾಸಿಗಳು ಮಾತ್ರ ದೇವರ ವಾಕ್ಯದ ಆಳವನ್ನು ಅರ್ಥಮಾಡಿಕೊಂಡು ಯೇಸುವನ್ನು ಹಿಂಭಾಲಿಸಲು ಮುಂದೆ ಬಂದು – "ಯಜ್ಞದ ಮೂಲಕ ಒಡಂಬಡಿಕೆ" ಮಾಡುತ್ತಾರೆ.

"**ನಂಬಿಗಸ್ತರು**" ಅಥವಾ ನಂಬಿಗಸ್ತರಾಗಿ ಮಾಡಿದ ಒಡಂಬಡಿಕೆಯನ್ನು ನೆರವೇರಿಸುವವರು.

ಇವರು ಬಹಳ ಕಡಿಮೆ ಜನರಾಗಿದ್ದು ಅವರ ಸಂಖ್ಯೆಯು ನಿಶ್ಚಿತವಾಗಿದ್ದು ಅದು 1,44,000 ಎಂದು ಸತ್ಯವೇದದಲ್ಲಿ ಓದುತ್ತೇವೆ.

ಆದ್ದರಿಂದ ಒಬ್ಬ ವಿಶ್ವಾಸಿಯು ಹಿಂಭಾಲಕನಾಗಿ "**ಯಜ್ಞದ ಮೂಲಕ ಒಡಂಬಡಿಕೆ**"ಯನ್ನು ಮಾಡಿದನಂತರ "**ತನ್ನ ಸ್ವಂತ ಶಿಲುಬೆಯನ್ನು**" ಹೊತ್ತುಕೊಂಡು ಹೋಗುವವನನ್ನು ಮಾತ್ರ – "ಕ್ರಿಸ್ತನಲ್ಲಿ" ಅಥವಾ ಯಜ್ಞ ಬಲಿಯಾದ ಕ್ರಿಸ್ತನ ಶರೀರದ ಒಳಗೆ ಇರುವನೆಂದು ಹೇಳಲಾಗುತ್ತದೆ.

**ಇಂತಹವರನ್ನು ಮಾತ್ರ ಇಲ್ಲಿ ಹೊಸ ಸೃಷ್ಟಿ ಎಂದು ಸೂಚಿಸಲಾಗಿದೆ.**
**ಇಂತಹವರು ಆದಾಮನ (ಪಾಪದ) ವಂಶದಲ್ಲಿ ಇನ್ನು ಇರುವದೇ ಇಲ್ಲ!!**

ಅವರು ಇನ್ನು ಮಾಂಸ ಮತ್ತು ರಕ್ತದಲ್ಲಿರುವ ಶರೀರದಲ್ಲಿ ಜೀವಿಸುತ್ತಾ ಇದ್ದರೂ ಅವರು ಇನ್ನೂ ಸಾಧಾರಣ ಮನುಷ್ಯರಲ್ಲ!!

**ಆದ್ದರಿಂದ ಒಬ್ಬ ಹೊಸ ಸೃಷ್ಟಿಯನ್ನು ಹೊರಗಿನಿಂದ ಗುರುತಿಸಲು ಸಾಧ್ಯವಿಲ್ಲ ಆದರೆ ಒಳಗಿನಿಂದ ಮಾತ್ರ ಗುರುತಿಸಬಹುದು.**

**ಹಾಗಾದರೆ ಈ "ಹೊಸ ಸೃಷ್ಟಿಯಲ್ಲಿ" ಇರುವ ವ್ಯತ್ಯಾಸವೇನು?**

ವ್ಯತ್ಯಾಸವೇನೆಂದರೆ, ಇವರಿಗಿರುವ ಶರೀರದ ಆಲೋಚನೆ (ಮನಸ್ಸು)

ಜೊತೆಗೆ ......ಆತ್ಮೀಕ ಆಲೋಚನೆ (ಮನಸ್ಸು) ಸಹ ಹೊಂದುವವರು.

ಆದರೆ ಈ "**ಹೊಸ ಮನಸ್ಸು**" ಆರಂಭದಲ್ಲಿ
ಬಹಳ ಚಿಕ್ಕದಾಗಿದ್ದು
ಕಣ್ಣಿಗೆ ಕಾಣದಹಾಗಿರುತ್ತದೆ.



ಈ "ಭ್ರೂಣಾಂಕುರ"ದ ಹೊಸ ಮನಸ್ಸು ದೊಡ್ಡದಾಗಬೇಕು ಮತ್ತು ಬೆಳೆಯಬೇಕು

ಮತ್ತು.... ಬೆಳವಣಿಗೆಗೆ ಪೋಷಕಾಂಶ ಬೇಕು.

ಮತ್ತು ಅನೇಕ ವಿರೋಧಿಗಳಿಂದ ರಕ್ಷಣೆಯಾಗಬೇಕು.



ಇದು ಒಬ್ಬ ಹೆಂಗಸಿನ ಗರ್ಭಕೋಶದಲ್ಲಿರುವ ಭ್ರೂಣಕ್ಕೆ ಸಮಾನವಾಗಿದೆ!!

ಈಗ ಈ "**ಹೊಸ ಮನಸ್ಸು**" ದೊಡ್ಡದಾಗಬೇಕು ಮತ್ತು ಒಂದು ಅಳತೆಯವರೆಗೂ ಬೆಳೆಯಬೇಕು.



**ಆ ಬೆಳವಣಿಗೆಯ ಅಳತೆ ಎಂದರೇನು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಕೊರಿಂಥದವರಿಗೆ 2 :16**

**"ಕರ್ತನ ಮನಸ್ಸನ್ನು ತಿಳುಕೊಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದದೆಯಲ್ಲಾ. ನಮಗಾದರೋ ಕ್ರಿಸ್ತನ ಮನಸ್ಸು ದೊರೆಕಿತು."**

ಹೌದು! ಈ "ಹೊಸ ಮನಸ್ಸು" ಒಂದು ಆತ್ಮೀಕ ಮನಸ್ಸಾಗಿದೆ ಮತ್ತು ಕ್ರಿಸ್ತನ ಮನಸ್ಸಾಗಿದೆ!



**ಅದು ಪ್ರತಿದಿನವೂ ಕ್ರಿಸ್ತನ "ಅಳತೆ"ಯಲ್ಲಿ ಬೆಳಯುಬೇಕು!**

ಇದನ್ನೇ ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ರೋಮಾಪುರದವರಿಗೆ 8 : 29**

**"....ತಾನು ಯಾರನ್ನು ತನ್ನವರೆಂದು ಮೊದಲು ತಿಳುಕೊಂಡನೋ ಅವರನ್ನು ತನ್ನ ಮಗನ ಸಾರೂಪ್ಯವುಳ್ಳವರಾಗುವದಕ್ಕೆ ಮೊದಲೇ ನೇಮಿಸಿದನು."**

ಹೌದು! ಕೊನೆಯ ಬೆಳವಣಿಗೆ ಮತ್ತು ಗುರಿ ಹೊಂದಿರುವ ಈ "ಹೊಸ ಮನಸ್ಸು"

ಯಾವುದೆಂದರೆ – "ತನ್ನ ಮಗನ ಸಾರೂಪ್ಯ"

**ಇದು ಜೀವನ ಪರ್ಯಂತ ದೊಡ್ಡದಾಗುವ ಮತ್ತು ಬೆಳೆಯುವ ಕಾರ್ಯವಾಗಿದೆ!!**

**ಈ "ಭ್ರೂಣಾಂಕುರ" ಆರಂಭದ - "ಹೊಸ ಮನಸ್ಸು" ಆತ್ಮೀಕವಾಗಿ ಗರ್ಭಧಾರಣೆ ಹೊಂದುವದಾಗಿದೆ.**

ಈಗ ನಾವು ಈ "ಹೊಸ ಸೃಷ್ಟಿ"ಯ ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

2 **ಕೊರಿಂಥದವರಿಗೆ** 5:17 – "....ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."

**ಇದರ ಅರ್ಥವೇನು?**

ಇದು ಯಾವ ನಿಜಾಂಶವನ್ನು ಸೂಚಿಸುತ್ತದೆ ಎಂದರೆ –

.....ಚಿತ್ತ/ಕನಸುಗಳು/ಗುರಿಗಳು/ಮಹತ್ವಕಾಂಕ್ಷೆ ಎಲ್ಲವೂ ಹೊಸದಾಗುತ್ತವೆ – ಇದಲ್ಲದೆ ನಮ್ಮ ಯೋಚನೆಗಳು, ಮಾತುಗಳು ಮತ್ತು ಕ್ರಿಯೆಗಳು ಎಲ್ಲವೂ ಹೊಸದಾಗುತ್ತವೆ!!

ಈ ಆತ್ಮೀಕ "ಹೊಸ ಮನಸ್ಸು" ಶಾರೀರಿಕ "ಹಳೆಯ ಮನಸ್ಸು" ಮತ್ತು ದೇಹವನ್ನು ಹತೋಟಿಯಲ್ಲಿ ಇಡುವದಕ್ಕೆ ಆರಂಭಿಸುತ್ತದೆ. ಇದನ್ನು ಕುರಿತು ನಾವು ಹೀಗೆ ಓದುತ್ತೇವೆ –

**ಕೊಲೊಸ್ಸೆಯವರಿಗೆ 3 : 9.10**

"ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ; ನೀವು ಪೂರ್ವಸ್ವಭಾವವನ್ನು ಅದರ ಕೃತ್ಯಗಳನ್ನು ಕೂಡ ತೆಗೆದಿಟ್ಟು ನೂತನಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ. ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ."

ಹೌದು! "**ಪೂರ್ವಸ್ವಭಾವ**" ಎಂದರೆ ಭೂಮಿಯ ಮತ್ತು ಶರೀರದ ಮನಸ್ಸು, ಆದರೆ "**ನೂತನಸ್ವಭಾವ**" ಎಂದರೆ ಪರಲೋಕ ಮತ್ತು ಆತ್ಮೀಕ ಮನಸ್ಸು.

ಅವೆರಡೂ ಒಂದಕ್ಕೊಂದು ವಿರೋಧವಾಗಿರುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಗಲಾತ್ಯದವರಿಗೆ 5 : 17**

**"ಯಾಕೆಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರೋಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತದೆ."**




ಮತ್ತು ಹೌದು! "ಹೊಸ ಸೃಷ್ಟಿಯು" ಬೆಳವಣಿಗೆಯು ಈ ಯುದ್ಧ ಮತ್ತು ಹೋರಾಟದ ಮೂಲಕ ಈ ಎರಡು ಸ್ವಭಾವ ನಡುವೆ ಹೊಂದುತ್ತದೆ –

**"ಪೂರ್ವಸ್ವಭಾವ ಮತ್ತು ನೂತನ ಸ್ವಭಾವ"**

ಈ ಹೋರಾಟವನ್ನು ಕುರಿತು ಅಪ್ರೋಸ್ತಲನಾದ ಪೌಲನು ಮತ್ತೆ ಕೆಳಗಿನ ವಾಕ್ಯದಲ್ಲಿ ವಿವರಿಸಿರುವದನ್ನು ಓದುತ್ತೇವೆ –

**2 ಕೊರಿಂಥದವರಿಗೆ 4 : 7-10**

**"ಬಲಾಧಿಕ್ಯವು ದೇವರದೇ ಹೊರತು ನಮ್ಮೊಳಗಿಂದ ಬಂದದ್ದಲ್ಲವೆಂದು ತೋರುವದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು. ಸರ್ವವಿಧದಲ್ಲಿಯೂ ನಮಗೆ ಇಕ್ಕಟ್ಟು ಇದ್ದರೂ ನಾವು ಅತಿ ಸಂಕಟ ಪಡುವವರಲ್ಲ; ನಾವು ದಿಕ್ಕು ಕಾಣದವರಾಗಿದ್ದರೂ ಕೇವಲ ದೆಸೆಗೆಟ್ಟವರಲ್ಲ; ಹಿಂಸೆಪಡುವವರಾಗಿದ್ದರೂ ಕೈಬಿಡಲ್ಪಟ್ಟವರಲ್ಲ; ಕೆಡವಲ್ಪಟ್ಟವರಾಗಿದ್ದರೂ ಪ್ರಾಣನಷ್ಟಪಡುವವರಲ್ಲ; ಯೇಸುವಿನ ಜೀವವು ನಮ್ಮ ದೇಹದಲ್ಲಿ ಉಂಟೆಂದು ತೋರಿಬರುವದಕ್ಕಾಗಿ ಯೇಸುವಿನ ಮರಣಾವಸ್ಥೆಯನ್ನು ನಾವು ಯಾವಾಗಲೂ ದೇಹದಲ್ಲಿ ಅನುಭವಿಸುತ್ತಾತಿರುಗಾಡುತ್ತೇವೆ."**

ಹೌದು! ಅಪ್ಪೊಸ್ತಲನಾದ ಪೌಲನು –

ಈ ನಿಕ್ಷೇಪವು.... ಅಂದರೆ ನೂತನ ಮನಸ್ಸು ಈ

"ಮಣ್ಣಿನ ಘಟಗಳಲ್ಲಿ" .....ಶರೀರ ಮತ್ತು ಅದರ ಮನಸ್ಸಿನೊಂದಿಗೆ ಹೇಗೆ ಬೆಳೆಯಬೇಕು ಎಂದು ಹೇಳುತ್ತಾನೆ.

ಇದರಿಂದ ಸದಾ ಒಂದಕ್ಕೊಂದು ವಿರೋಧತ್ವವಿರುತ್ತದೆ ಮತ್ತು ದೇವರು ವಿಶೇಷವಾಗಿ ಈ ರೀತಿಯಾದ ವಿಷಯವನ್ನು ನಾವು ಸತ್ಯಕ್ಕಾಗಿ

ನಂಬಿಗಸ್ತರಾಗಿರುತ್ತೇವೋ ಎಂದು ಪರೀಕ್ಷಿಸುವದಕ್ಕಾಗಿ ಇಟ್ಟಿದ್ದಾನೆ!

ಮತ್ತು ಈ ಎರಡು ಮನಸ್ಸುಗಳ ನಡುವೆಯ ಹೋರಾಟವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಸೂಚಿಸಲಾಗಿದೆ –



**ಮತ್ತಾಯ 7 : 14**

**"ನಿತ್ಯಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ದಾರಿ ಬಿಕ್ಕಟ್ಟು."**

ಹೌದು! ನಿಜವಾಗಿಯೂ ಇದೊಂದು ಹೋರಾಟದ ಬಿಕ್ಕಟ್ಟಾದಮಾರ್ಗ....

ಇದರಲ್ಲಿ ಒಬ್ಬ ವ್ಯಕ್ತಿಯು ಕೊನೆಯವರೆಗು ತಾಳುವವನು ಜೀವವನ್ನು ಪಡೆದುಕೊಳ್ಳುತ್ತಾನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 24:13**

**"ಕಡೇಯವರೆಗೂ ತಾಳುವವನು ರಕ್ಷಣೆ ಹೊಂದುವನು."**


....ಮತ್ತೆ ಇದೇ ವಿಷಯವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 3:21** – **"ಹಾಗೆಯೇ ಜಯಹೊಂದುವವನನ್ನು ನನ್ನೊಡನೆ**

ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು."


**ಈ ಒಂದು ದೇಹದಲ್ಲಿ ಎರಡು ಮನಸ್ಸುಗಳ ನಡುವೆ ನಿತ್ಯವಾಗಿ ಹೋರಾಟ ನಡೆಯುತ್ತಲೇ ಇರುತ್ತದೆ. ಪ್ರತಿಯೊಂದು ಈ ಶರೀರವನ್ನು ಹತ್ತೋಟಿಯಲ್ಲಿಡುವದಕ್ಕೆ ಹುಡುಕುತ್ತದೆ (ಪ್ರಯತ್ನಿಸುತ್ತದೆ).**

ಈ "ಹೊಸ ಸೃಷ್ಟಿಯ" ಬೆಳವಣಿಗೆಯನ್ನು ನಕ್ಷೆಯ ಮೂಲಕ ಕೆಳಗೆ ಕೊಡಲಾಗಿದೆ –




ಸತ್ಯದ ಬೀಜವನ್ನು ಪಡೆದುಕೊಳ್ಳುವ ಸಮಯದಲ್ಲಿ ಒಬ್ಬ ಹಳೆಯ ವ್ಯಕ್ತಿಗಿರುವ ಚಿತ್ರ.

(ಸಣ್ಣ ಚುಕ್ಕೆಯು ಸತ್ಯದ ಬೀಜವಾಗಿದ್ದು ನಂತರ ಭ್ರೂಣಾವಸ್ಥೆ ಯಲ್ಲಿ ಹೊಸ ಮನಸ್ಸಾಗಿ ಬೆಳೆಯುತ್ತದೆ.)




ಇದು ಕೆಲವು ಕಾಲದ ನಂತರ ಕ್ರಮೇಣವಾಗಿ ಸತ್ಯದ ಜ್ಞಾನದಲ್ಲಿ ಬೆಳೆದು ಸಣ್ಣ ಪ್ರಮಾಣದಲ್ಲಿ ಪ್ರಶ್ಚಾತಾಪಪಡುವದಕ್ಕೆ ಆರಂಭಿಸುವದರ ಚಿತ್ರವಾಗಿದೆ.




ಇಲ್ಲಿ ಸ್ವಲ್ಪ ಹೆಚ್ಚು ಕಾಲದ ನಂತರ ಹೆಚ್ಚು ಜ್ಞಾನದಲ್ಲಿ ಬೆಳೆದು ವಿಧೇಯರಾಗುವಾಗ ಶುದ್ಧೀಕರಣವು ಆರಂಭವಾಗುತ್ತದೆ. (ರೋಮಾಪುರದವರಿಗೆ 12:2)




"ದೀಕ್ಷಾಸ್ನಾನದ ನಿರ್ಧಾರ" ಮಾಡಿರುವದನ್ನು
"ಯಜ್ಞದ ಮೂಲಕ ಮಾಡಿದ ಒಡಂಬಡಿಕೆಗೆ
ಸಾಂಕೇತಿಕವಾಗಿದೆ ಮತ್ತು ಆತ್ಮೀಕವಾಗಿ
ಭ್ರೂಣಾಂಕುಶವಾಗುತ್ತದೆ
ಮತ್ತು "ಹೊಸ ಸೃಷ್ಟಿ"ಯು ಆರಂಭವಾಗುತ್ತದೆ.
(ರೋಮಾಪುರದವರಿಗೆ 12:1)




ಕಾಲಕ್ರಮೇಣ ಇನ್ನೂ ಬೆಳೆಯುತ್ತಾ ಆಳವಾದ
ಸತ್ಯಗಳನ್ನು ಅರಿತು ವಿದೇಯರಾಗುವದರಿಂದ
ತನ್ನೊಳಗೆ ಹೆಚ್ಚಾದ ಹೋರಾಟ
ಉಂಟಾಗುತ್ತದೆ.
(2 ಕೊರಿಂಥದವರಿಗೆ 4:7–10)



ಕ್ರಮೇಣವಾಗಿ ಈ "ಹೊಸ ಮನಸ್ಸು"
ಬಲವಾಗಿ ಬೆಳೆಯುತ್ತದೆ ಮತ್ತು ಹಳೆಯ
ಮನಸ್ಸು ಮತ್ತು
ಅದರ ಇಚ್ಛೆಗಳ ವಿರೋಧವಾಗಿ ಬಲವಾದ
ಹೋರಾಟ ಮಾಡುತ್ತದೆ –
ಅನೇಕ ಸಲ ಆಧಿಪತ್ಯ ನಡೆಸುತ್ತದೆ.



ಹೊಸಮನಸ್ಸು ಈ ಹಳೆಯ ಮನಸ್ಸು ಮತ್ತು
ಶರೀರವನ್ನು ಹತೋಟಿಯಲ್ಲಿಡುತ್ತದೆ ಮತ್ತು
ಅದರ ಗುಲಾಮನನ್ನಾಗಿ ಮಾಡುತ್ತದೆ.
ಹಳೆಯ ಮನಸ್ಸು ಬಹಳವಾಗಿ
ಬಲಹೀನವಾಗುತ್ತದೆ ಮತ್ತು
ನಿರ್ಭಂಧಿಸಲ್ಪಡುತ್ತದೆ.





ಕ್ರಿಸ್ತನ ಮನಸ್ಸು (ಫಿಲಿಪ್ಪಿಯದವರಿಗೆ 2:5) ಬೆಳವಣಿಗೆ ಹೊಂದುತ್ತದೆ ಮತ್ತು ಹಿಂದೆಂದಿಗಿಂತಲೂ ಯೊಚನೆ, ಮಾತು ಮತ್ತು ಕ್ರಿಯೆಗಳಲ್ಲಿ ಆತ್ಮೀಕವಾಗಿ ಆಳ್ವಿಕೆಮಾಡುತ್ತದೆ. ಈ ಹೊಸ ಸೃಷ್ಟಿಯು ಈಗ ಹುಟ್ಟಲು ಸಿದ್ಧವಾಗಿದೆ!!

ಮರಣ -  ಶರೀರವು ಮರಣಹೊಂದುತ್ತದೆ....




ಹೌದು! ಮೊದಲ ಪುನರುತ್ಥಾನದಲ್ಲಿ ಈ "ಹೊಸಸೃಷ್ಟಿ"ಯು – "ಆತ್ಮೀಕವಾಗಿ ಹುಟ್ಟುತ್ತದೆ." ದೈವೀಕ ಸ್ವಭಾವದ ಹೊಸ ಶರೀರವನ್ನು ಹೊಂದುತ್ತದೆ – ನಿರ್ಲಯತ್ವ ಮತ್ತು ಮಹಿಮೆಯುಳ್ಳದಾಗಿರುತ್ತದೆ (ಪ್ರಕಟನೆ 20:6) ಇವರೆಲ್ಲರು ಒಟ್ಟು 1,44,000 ಮಾತ್ರ!!

**ದಯವಿಟ್ಟು ಗಮನಿಸಿರಿ:** "ಹೊಸ ಸೃಷ್ಟಿ"ಗಳಲ್ಲಿ ಅನೇಕರು ಮೊದಲ ಪುನರುತ್ಥಾನ ಹೊಂದುವದಿಲ್ಲ ಆದರೆ ಎರಡನೆಯ ಪುನರುತ್ಥಾನ ಹೊಂದುವರು. ಇವರು ಆತ್ಮದಿಂದ ಹುಟ್ಟಿ"ದವರಾಗಿ ದೇವದೂತರಂತೆ ಲಯವಾಗಿ (ನಾಶವಾಗುವ) ಆತ್ಮೀಕ ಶರೀರವನ್ನು ಹೊಂದಿರುತ್ತಾರೆ. ಇವರೇ ಮಹಾ ಸಮೂಹವು (ಪ್ರಕಟನೆ 7:9)

ಈಗ ಈ "ಹೊಸ ಸೃಷ್ಟಿ"ಯ ಬೆಳವಣಿಗೆಯ ವಿಧಾನವನ್ನು ಆಳವಾಗಿ ಮತ್ತು ವಿವರವಾಗಿ ಅಭ್ಯಾಸಮಾಡಿದಮೇಲೆ, ಯಾವುದೇ ಸಮಯದಲ್ಲಾಗಲಿ ಒಬ್ಬ ಹೊಸ ಸೃಷ್ಟಿಗೆ ಉನ್ನತಮಟ್ಟವಾಗಿ ಬರುವ ಪ್ರಶ್ನೆ ಏನೆಂದರೆ –

**"ನಾನು ಒಬ್ಬ ಹೊಸ ಸೃಷ್ಟಿಯಾಗಿ ಹೇಗೆ ಮುಂದುವರಿಯುತ್ತಾ ಇದ್ದೇನೆ ಮತ್ತು ಬೆಳೆಯುತ್ತಿದ್ದೇನೆ?"**

**"ನನ್ನಲ್ಲಿರುವ ಕೊರತೆ ಏನು ಮತ್ತು ಅದು ಹೇಗೆ ನನಗೆ ಗೊತ್ತಾಗುತ್ತದೆ?"**




ಈ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯಲು ಮತ್ತು ಹೊಸ ಸೃಷ್ಟಿಯು ದೊಡ್ಡದಾಗುವದು ಮತ್ತು ಬೆಳವಣಿಗೆ ಹೊಂದುವ ಮಟ್ಟವನ್ನು ಮೇಲ್ವಿಚಾರಣೆ ನೋಡಿಕೊಳ್ಳಲು ನಮ್ಮ ಕರ್ತನು ಒಂದು – ಅಳತೆಯ ಸಾಧನವನ್ನು ಒದಗಿಸಿದ್ದಾನೆ. ಹೇಗೆ ವೇಗದ ಅಳತೆ, ವಿದ್ಯುತ್ ಅಳತೆ, ವೇಗಮಾಪಕ, ನೀರಿನ ಚಲನೆ, ಇತರೆಯನ್ನು ಅಳೆಯುವ ಸಾಧನಗಳಿವೆಯೋ ಹಾಗೆಯೇ,

➡ ....ಈ ಹೊಸ ಸೃಷ್ಟಿಯನ್ನು ಅಳೆಯುವ ಸಾಧನ (“A METER” ) ಇದೆ!! ಅದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

**2 ಪೇತ್ರ 1 : 5-7**

**“ಈ ಕಾರಣದಿಂದಲೇ ನೀವು ಪೂರ್ಣಾಸಕ್ತಿಯುಳ್ಳವರಾಗಿ ನಿಮಗಿರುವ ನಂಬಿಕೆಗೆ ಸದ್ಗುಣವನ್ನು ಸದ್ಗುಣಕ್ಕೆ ಜ್ಞಾನವನ್ನೂ ಜ್ಞಾನಕ್ಕೆ ದಮೆಯನ್ನೂ ದಮೆಗೆ ತಾಳ್ಮೆಯನ್ನೂ ತಾಳ್ಮೆಗೆ ಭಕ್ತಿಯನ್ನೂ ಬಕ್ತಿಗೆ ಸಹೋದರ ಸ್ನೇಹವನ್ನೂ ಸಹೋದರ ಸ್ನೇಹಕ್ಕೆ ಪ್ರೀತಿಯನ್ನೂ ಕೂಡಿಸಿರಿ.”**

ಹೌದು! ಇದೇ ಹೊಸ ಸೃಷ್ಟಿಯ ಬೆಳವಣಿಗೆಯ ಅಳತೆಯ ಸಾಧನವಾಗಿದೆ!!

ಪ್ರತಿಯೊಬ್ಬ ಹೊಸ ಸೃಷ್ಟಿಯು ಆತನ / ಆಕೆಯ ಬೆಳವಣಿಗೆಯ ಮಟ್ಟವನ್ನು ಈ ಅಳತೆಯ ಸಾಧನದ ಮೂಲಕ ನೋಡಬಹುದಾಗಿದೆ!!

☞ ಈ ಬೆಳವಣಿಗೆ ಒಟ್ಟುಮೊತ್ತವನ್ನು ಹೀಗೆ ವಿವರಿಸಬಹುದು –

"ಆತ್ಮೀಕ ಫಲಗಳ ಅಳತೆಯು ಹೆಚ್ಚಾಗುವದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

ಗಲಾತ್ಯದವರಿಗೆ 5:22 – “ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ – ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ.”


➡ ವಾಕ್ಯದ ಜ್ಞಾನ ಮತ್ತು ಅದರ ಅರಿಯುವಿಕೆ ಹೆಚ್ಚಾಗುವದು ಹೊಸಸೃಷ್ಟಿಗೆ ನಿಜವಾದ ಆಹಾರವೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆರೆಮೀಯ 15:16** - “ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರಮಾಡಿಕೊಂಡೆನು.”

**ಈ ಹೊಸ ಸೃಷ್ಟಿಯ ಬೆಳವಣಿಗೆಯ ವಿಧಾನವನ್ನು ಕುರಿತು ಹಳೆಯ ಒಡಂಬಡಿಕೆಯಲ್ಲಿಯೂ ಸೂಚಿಸಲಾಗಿದೆ.**

**ಅದು ಎಲ್ಲಿ ಎಂದು ನೀವು ಹೇಳಬಲ್ಲಿರಾ?**

ಹೌದು! ಅದು ಗುಡಾರದ "ಪವಿತ್ರ" ಸ್ಥಳದೊಳಗಿದೆ.



ಅಲ್ಲಿ ನಿರಂತರವಾದ ಬೆಳವಣಿಗೆಯ ವಿಧಾನವನ್ನು ಕುರಿತು

**ದೀಪಸ್ತಂಭಗಳಲ್ಲಿ ಸೂಚಿಸಲಾಗಿದೆ.**

ಇದು ಪವಿತ್ರಾತ್ಮನ "ಬೆಳಕ"ನ್ನು ಸೂಚಿಸುತ್ತದೆ.

**“ರೊಟ್ಟಿ”**

ಇದು ದೇವರ ಸತ್ಯವಾಕ್ಯಗಳನ್ನು "ತಿನ್ನುವು"ದನ್ನು ಸೂಚಿಸುತ್ತದೆ. ಇದು ಹೊಸ ಸೃಷ್ಟಿಗೆ ಆತ್ಮೀಕ ಆಹಾರವಾಗಿದೆ.

## “ಧೂಪವೇದಿ”

ಇದು ಹೊಸ ಸೃಷ್ಟಿಯು "ಯಜ್ಞದ ಮೂಲಕ ಮಾಡಿಕೊಂಡ ಒಡಂಬಡಿಕೆ"ಯನ್ನು ಪ್ರತಿದಿನವೂ ವಿಧೇಯತೆಯಿಂದ ಗುಣಗಳ ಫಲಗಳನ್ನು ವ್ಯಕ್ತಪಡಿಸುವದನ್ನು ಸೂಚಿಸುತ್ತದೆ.

**ಹೌದು! ಗುಡಾರದಲ್ಲಿರುವ "ಪವಿತ್ರ"ಸ್ಥಳವು ಹೊಸಸೃಷ್ಟಿಯ ಗರ್ಭಕೋಶವೆಂದು ಎಣಿಸಬಹುದು.**

ನಂತರ ಅಪೋಸ್ತಲನಾದ ಯೋಹಾನನು ಈ ಹೊಸಸೃಷ್ಟಿಯ ಬೆಳವಣಿಗೆಯ ಕಾರ್ಯದ ಇನ್ನೊಂದು ಮುಖ್ಯವಾದ ವಿಷಯವನ್ನು ಕುರಿತು ಹೀಗೆ ಮಾತನಾಡುತ್ತಾನೆ –

**1 ಯೋಹಾನ 5:1**

**“ತನ್ನನ್ನು ಹುಟ್ಟಿಸಿದಾತನನ್ನು ಪ್ರೀತಿಸುವ ಪ್ರತಿಯೊಬ್ಬನು ಆತನಿಂದ ಹುಟ್ಟಿದವನನ್ನು ಸಹ ಪ್ರೀತಿಸುತ್ತಾನೆ.”**



ಹೌದು! ಇದೇ ರೀತಿ ಯಾರ್‍ಯಾರು ಅದೇ "ನೀರಿನಲ್ಲಿ" ದೇವರಿಂದ ಹುಟ್ಟಿರುತ್ತಾರೋ (ಆತ್ಮೀಕ ಗರ್ಭಧಾರಣೆ) ಅಂಥವರು ಸಹೋದರ ಪ್ರೀತಿಯನ್ನು ಹೊಂದಿರುತ್ತಾರೆ.

ಇದು ಪ್ರೀತಿಯ ಮನಸ್ಸು (ಇದೆಯೋ/ಇಲ್ಲವೋ) ಎಂದು ಪರೀಕ್ಷಿಸುವದಾಗಿದೆ ಮತ್ತು ಸಹೋದರ/ಸಹೋದರಿಗಳೊಂದಿಗೆ ಮಾತನಾಡುವಾಗ ಮತ್ತು ಕೆಲಸಮಾಡುವಾಗ ಉಂಟಾಗುವ ಶಾರೀರಿಕ ಅಪರಿಪೂರ್ಣತೆಯಿಂದಾಗಿರುವದರಿಂದ ದೊಡ್ಡ ಸವಾಲಾಗಿದೆ!!

ಕೊನೆಯದಾಗಿ ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದದ್ದು ಏನೆಂದರೆ ಈ ಹೊಸ ಸೃಷ್ಟಿಯ ಸೃಷ್ಟಿಕರ್ತನು ಯಾರೆಂಬದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಫಿಲಿಪ್ಪಿಯವರಿಗೆ 1:6

**"ಈ ಒಳ್ಳೇ ಕೆಲಸವನ್ನು ನಿಮ್ಮಲ್ಲಿ ಪ್ರಾರಂಭಿಸಿದಾತನು ಅದನ್ನು ನಡಿಸಿಕೊಂಡುಯೇಸು ಕ್ರಿಸ್ತನು ಬರುವ ದಿನದೊಳಗಾಗಿ ಸಿದ್ಧಿಗೆ ತರುವನೆಂದು ನನಗೆ ಭರವಸವುಂಟು."**

ಹೌದು! ಇದು ಪರಲೋಕದ ತಂದೆಯ ಕೆಲಸವಾಗಿದೆ!
ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಮತ್ತೆ ಹೀಗೆ ಓದುತ್ತೇವೆ....

## ಫಿಲಿಪ್ಪಿಯವರಿಗೆ 2:13

**"ಯಾಕಂದರೆ ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟುಮಾಡುವವನಾಗಿದ್ದಾನೆ."**

ಹೌದು! ದೇವರು ಇಲ್ಲಿ ಹೊಸಸೃಷ್ಟಿಯಲ್ಲಿ ಹೇಗೆ ಸೃಷ್ಟಿಯ ಕೆಲಸವನ್ನು ಮಾಡುತ್ತಾನೆಂದು ವಿವರಿಸಲಾಗಿದೆ!!

**ಈ ಕೆಳಗಿನ ವಾಕ್ಯದ ಅರ್ಥವೇನು?**

**"ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟುಮಾಡಿದ್ದಾನೆ."**

ಇದು ಹೇಗೆ ದೇವರು "ಶರೀರಧಾರಿ"ಯವರೊಳಗೆ ಆತ್ಮೀಕ ವಿಷಯಗಳ ಅಪೇಕ್ಷೆಯುಂಟಾಗಿ.... ಅದನ್ನು ನೆರವೇರಿಸಲು ಬಲವನ್ನು ವಿವಿದ ಸನ್ನಿವೇಶಗಳಲ್ಲಿ ಕ್ರಿಯೆ ಮಾಡುತ್ತಾನೆ.

ಇದನ್ನು ದೇವರು ತನ್ನ ವಾಕ್ಯದ ಬಲದ ಮೂಲಕ (**"ತನ್ನ ಸುಚಿತ್ತ"**) ...ಮತ್ತು ಆತನ ಪವಿತ್ರಾತ್ಮನ ಬಲದಿಂದ ಮಾಡುತ್ತಾನೆ (**"ಉದ್ದೇಶವನ್ನೂ"**)!!



ಹೌದು! ಒಬ್ಬ ಶಿಲ್ಪಿಯು ಕಲ್ಲಿನಲ್ಲಿ ಶಿಲೆಯನ್ನು
ಕೆತ್ತುವಂತೆ ಪರಲೋಕ ತಂದೆಯು ಎಲ್ಲಾ
ವಿಧವಾದ ಬದಲಾವಣೆ
ಮತ್ತು ಸೃಷ್ಟಿಕಾರ್ಯವನ್ನು ಮಾಡುತ್ತಾನೆ!



**ಆ ಕಲ್ಲು ತನ್ನನ್ನು
ಪರಿಪೂರ್ಣವಾಗಿ ಆತನ ಕೈಗಳಲ್ಲಿ
ಒಪ್ಪಿಸಬೇಕಷ್ಟೆ!**

ಆದ್ದರಿಂದ ಇದರ ಮೂಲಕ "**ಆತ್ಮದಿಂದ ಭ್ರೂಣಾಂಕುರ**"ವಾಗುತ್ತದೆ!

ಇಲ್ಲಿ ನಾವು ಗಮನಿಸಬೇಕಾದದ್ದೇನೆಂದರೆ ಹೊಸ ಮನಸ್ಸು "ಆತ್ಮದಿಂದ ಹುಟ್ಟು"ವದನ್ನು ಕುರಿತು ಮಾತನಾಡಲಾಗುತ್ತಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಕೊರಿಂಥದವರಿಗೆ 15:42-44**

**"ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ನಿರ್ಲಯಾವಸ್ಥೆಯಲ್ಲಿ ಎದ್ದುಬರುವದು.... ."**

ಆಂಗ್ಲ ಭಾಷೆಯಲ್ಲಿ **"the new mind"** ಎಂದರೆ –

..... "ಹೊಸ ಮನಸ್ಸನ್ನು" ಸೂಚಿಸುತ್ತದೆ. ಅದು ಪ್ರಾಕೃತ ದೇಹವಾಗಿ "ಬಿತ್ತಲ್ಪಡುತ್ತದೆ" ಆದರೆ ಪುನರುತ್ಥಾನದಲ್ಲಿ ಆತ್ಮಿಕದೇಹವಾಗಿ (ಜೀವದಲ್ಲಿ) ಎದ್ದು ಬರುವದು!

ಈ ಹುಟ್ಟುವ ವಿಧಾನವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ವಿವರಿಸಲಾಗಿದೆ –

**1 ಕೊರಿಂಥದವರಿಗೆ 15:52-53**

**"ಆದರೆ ಕಡೇ ತುತೂರಿಯ ಧ್ವನಿಯಾಗುವಾಗ ನಾವೆಲ್ಲರು ಒಂದು ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ ಮಾರ್ಪಡುವೆವು. ತುತೂರಿಯು ಊದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು, ನಾವು ಮಾರ್ಪಡುವೆವು. ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವದೂ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವದೂ ಅವಶ್ಯ."**

ಹೌದು! ಇಲ್ಲಿ ಶರೀರಗಳನ್ನು ಕುರಿತು ಸೂಚಿಸಲಾಗಿದೆ!!

ಈ "ಹೊಸ ಮನಸ್ಸು" ಲಯವಾಗುವ ಈ ದೇಹದೊಳಗಿಂದ –

......"ನಿರ್ಲಯತ್ವ" ಮತ್ತು ಆತ್ಮಿಕ ಶರೀರವನ್ನು ಧರಿಸಿಕೊಳ್ಳಬೇಕು.

**ಇದೇ "ಹೊಸ ಸೃಷ್ಟಿಯ" ಹುಟ್ಟುವ ವಿಧಾನವಾಗಿದೆ!!**

**ಈ ಹುಟ್ಟುವದು ಯಾವಾಗಾಗುತ್ತದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಥೆಸಲೋನಿಕದವರಿಗೆ 4:16,17**

**"ಕರ್ತನು.... ಆಕಾಶದಿಂದ ಇಳಿದು ಬರುವನು; ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು. ಆಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೆ ಒಯ್ಯಲ್ಪಡುವೆವು."**



ಹೌದು! ಅದು ಕರ್ತನ ಎರಡನೆಯ ಬರುವಿಕೆಯಲ್ಲಿ ಮತ್ತು ಮೊದಲ ಪುನರುತ್ಥಾನದಲ್ಲಿ....

ಕ್ರಿಸ್ತನಲ್ಲಿರುವ ಸತ್ತವರು" ಎದ್ದು ಬರುವರು.

**ಹೌದು! ಹೊಸ ಸೃಷ್ಟಿಯೆಲ್ಲರ "ಹುಟ್ಟುವಿ"ಕೆಗಾಗಿ ಕರ್ತನ ಎರಡನೆಯ ಬರುವಿಕೆಗಾಗಿ ಕಾಯುತ್ತದೆ!!**

ಈಗ ಯಾರಾದರು ಈ ಹೊಸ "ಆತ್ಮಿಕ"ಶರೀರ ಹೇಗಿರುತ್ತದೆ ಎಂದು ಕೇಳಬಹುದು?? ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**1 ಯೋಹಾನ 3:2**

**"ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು."**

ಆ ಆಲೋಚನೆಯನ್ನು ಸ್ವಲ್ಪ ಊಹಿಸಿ ನೋಡಿರಿ!!

**"…..ನಾವು ಆತನ ಹಾಗಿರುವೆವು."**



ಈ ಭ್ರೂಣಾಂಕುರದ "ಹೊಸ ಮನಸ್ಸು" ಆತ್ಮದಿಂದ ಹುಟ್ಟಿ ಆತ್ಮಿಕ ಜೀವಿಯಾಗಿದ್ದು ಸ್ವತಃ ಕರ್ತನಾದ ಯೇಸು ಕ್ರಿಸ್ತನ ಶರೀರದಂತಿರುವದು – ಆತನ ಸ್ವಭಾವದಲ್ಲಿಯೇ –

.....ದೈವೀಕ ಸ್ವಭಾವದಲ್ಲಿರುತ್ತದೆ!!

**ನಿಜವಾಗಿಯೂ ಎಂತಹ ಅತಿಶಯವಾದ ಹುಟ್ಟುವಿಕೆಯಾಗಿದೆ!!**

ಈ ಆತ್ಮಿಕ "ಹೊಸ ಮನಸ್ಸು" ಬಿದ್ದುಹೋದ ಮತ್ತು ಪಾಪದಲ್ಲಿರುವ ಶರೀರದಲ್ಲಿ ಭ್ರೂಣಾಂಕುರಗೊಂಡು, ನಂತರ ಬೆಳೆದು, ತಕ್ಕ ಕಾಲದಲ್ಲಿ ಆತ್ಮಿಕ ಶರೀರದಲ್ಲಿ ಹುಟ್ಟುತ್ತದೆ, ಇದು ಆ "ಹೊಸ ಮನಸ್ಸಿಗೆ" ಸರಿಯಾಗಿ ಹೊಂದುತ್ತದೆ!!

ಆಹ್! ಈ "ಹುಟ್ಟು"ವಿಕೆಯನ್ನು ಸ್ವತಃ ಯೇಸುತಾನೆ ನಿಕೊದೇಮನಿಗೆ ಹೇಳಿದ್ದಾನೆ ಮತ್ತು ಆ ಹುಟ್ಟು ಸ್ಥಿತಿಯನ್ನು ಗಾಳಿಗೆ ಮಾತ್ರ ಹೋಲಿಸಬಹುದಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋಹಾನ 3:8**

**"ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರೂ ಅದರಂತೆಯೇ ಅಂದನು."**

ಹೌದು! ಈ ಭೂಮಿಯಲ್ಲಿ ಆ ಹುಟ್ಟುವಿಕೆ ಮತ್ತು ಅದರ ಸ್ಥಿತಿಯನ್ನು ಕುರಿತು ಅತ್ಯುತ್ತಮವಾಗಿ ವಿವರಿಸಬಹುದೆಂದರೆ ಅದು ಗಾಳಿಯ ಮೂಲಕ ಮಾತ್ರ ಸಾಧ್ಯ!!

**ಅದು ಕಣ್ಣಿಗೆ ಕಾಣುವದಿಲ್ಲ ಏಕೆಂದರೆ ಅದು ಆತ್ಮಿಕ ಸ್ಥಿತಿಯಲ್ಲಿದೆ**

**.....ಮತ್ತು ಬಲವುಳ್ಳದಾಗಿದೆ ಏಕೆಂದರೆ ಅದರ ಸ್ಥಿತಿ ಮತ್ತು ಸಾಮರ್ಥ್ಯವು ದೈವೀಕ ಸ್ವಭಾವವುಳ್ಳದಾಗಿದೆ.**



**ಹೌದು! ಪ್ರಿಯ ಸಹೋದರ ಮತ್ತು ಸಹೋದರಿಯರೆ, ಸತ್ಯವೇನೆಂದರೆ ಈ ದಿನಗಳಲ್ಲಿ ನಮ್ಮ ಮಧ್ಯದಲ್ಲಿ**

**ಮತ್ತೆ ಭ್ರೂಣಾಂಕುರವಾದ ಕ್ರೈಸ್ತ"ರಾಗಿರುವದಕ್ಕೆ ಮಾತ್ರ ಸಾಧ್ಯವಾಗಿದೆ!**

ಏಕೆಂದರೆ ಕ್ರಿಸ್ತನ ಎರಡನೆಯ ಬರುವಿಕೆ ಮತ್ತು ಮೊದಲ
ಪುನರುತ್ಥಾನದಲ್ಲಿ ಮಾತ್ರ ಈ –


ನಿಜವಾದ "ಮತ್ತೆ ಹುಟ್ಟಿದ ಕ್ರೈಸ್ತರು" ಅಸ್ತಿತ್ವಕ್ಕೆ ಬರಲು ಸಾಧ್ಯ!!

**.....ಮತ್ತು ಆ ಸತ್ಯವನ್ನೇ ನಮ್ಮ ಕರ್ತನು ನಿಕೊದೇಮನಿಗೆ ಬೋಧಿಸಿದನು ಮತ್ತು**
**ಈ ದಿನ ಅದನ್ನು ಕಲಿತುಕೊಳ್ಳುವ ಭಾಗ್ಯವನ್ನು ಹೊಂದಿದ್ದೇವೆ!!**

**- ಆಮೆನ್ -**



For Private Circulation Only




NOT FOR SALE

For more Subjects contact: MESSENGERS OF CHRIST  E-mail: thekingdom1_6@yahoo.com